ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಪ್ರಾಯುಷ್ ಆದ್ದು. [ನಂ. 7.

ಬೆಂಗಳೂರು, ಗುರುವಾರ, ಫೆಬ್ರವರಿ ತಾ. 18, ಸನ್ 1909.

II ನೆ ಭಾಗ.

ಇಂಡ್ಯಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು ಮೊದಲಾದವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ವಿದ್ಯಾಭ್ಯಾಸದ ಇಲಾಖೆ.

ಪ್ರಕಟನ ಪತ್ರಿಕೆ, ಡಿ. ನಂಬರು 26, ಸನ್ 1909ನೆಯ ಇಸವಿ ಫೆಬ್ರವರಿ ತಾರೀಖು 11.

ಕನ್ನಡ ಪಂಡಿತ ಪರೀಕ್ಷೆ.

ಹೊಸದಾಗಿ ತಿದ್ದುಪಾಟು ಮಾಡಿದ ಮೈಸೂರು ಕನ್ನಡ ಪಂಡಿತ ಪರೀಕ್ಷೆಯ ನಿಬಂಧನೆಗಳು ಜನಗಳ ತಿಳುವಳಿಕೆಯ ಬಗ್ಗೆ ಪುನಃ ಈ ಕೆಳಗೆ ಪ್ರಕಟಿಸಲ್ಪಟ್ಟಿವೆ.

1. ಕನ್ನಡ ಪಂಡಿತ ಪರೀಕ್ಷೆಯು ಮೈಸೂರಿನಲ್ಲಿ 1908ನೆಯ ಇಸವಿಯ ಲಾಗಾಯಿತು ಪ್ರತಿ ಮೂರು ವರ್ಷಗಳ ಪೈಕಿ ಮೊದಲು ಎರಡು ವರ್ಷಗಳಲ್ಲಿ ನಡೆದು, ಮೂರನೆಯ ವರ್ಷ ಮಾತ್ರ ನಡೆಯದೆ, ನವೆಂಬರು ತಿಂಗಳು 15ನೆಯ ತಾರೀಖಿನಲ್ಲಿ ಅಥವಾ ಆ ದಿವಸ ಭಾನುವಾರವಾದ ಪಕ್ಷದಲ್ಲಿ ನವೆಂಬರು 16ನೆಯ ತಾರೀಖಿನಲ್ಲಿ ಆರಂಭವಾಗಿ ಆ ದಿವಸದಲ್ಲಿಯೂ ಮುಂದಿನ ದಿವಸಗಳಲ್ಲಿಯೂ ನಡೆಯಿಸಲ್ಪಡುವುದು.

2. ಈ ಪರೀಕ್ಷೆಗೆ ಇದರಡಿ ವಿವರಿಸಲ್ಪಟ್ಟಿರುವವರು ಸೇರಬಹುದು :—

(a) "ದೇಶೀಯೋಪಾಧ್ಯಾಯ" ಪರೀಕ್ಷೆ, "ಅಪ್ಪರ್ ಸೆಕಂಡರಿ" ಪರೀಕ್ಷೆ, "ಮದ್ರಾಸ್ ಯೂನಿವರ್ಸಿಟಿ ಮೆಟ್ರಿಕ್ಯುಲೇಷನ್" ಪರೀಕ್ಷೆ, ಇವುಗಳಲ್ಲಿ ಯಾವುದಾದರೂ ಒಂದು ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವವರು. ಈ ಪರೀಕ್ಷೆಯಾದ ಕಾಲಕ್ಕೂ ಇವರು ಹೋಗಬೇಕೆಂದು ಅಪೇಕ್ಷಿಸುವ ಪಂಡಿತ ಪರೀಕ್ಷೆ ನಡೆಯುವ ಕಾಲಕ್ಕೂ ಕನಿಷ್ಠ ಪಕ್ಷ ಎರಡು ವರ್ಷ ಅಂತರವಿರಬೇಕು. (b) ಲೋವರ್ ಸೆಕಂಡರೀ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವ ಪರೀಕ್ಷ್ಯೆದುರು (Female candidates) ಈ ಪರೀಕ್ಷೆಯಾದ ಕಾಲಕ್ಕೂ ಇವರು ಹೋಗಬೇಕೆಂದು ಅಪೇಕ್ಷಿಸುವ ಪಂಡಿತ ಪರೀಕ್ಷೆಯು ನಡೆಯುವ ಕಾಲಕ್ಕೂ ಕನಿಷ್ಠ ಪಕ್ಷ ನಾಲ್ಕು ವರ್ಷ ಅಂತರವಿರಬೇಕು.

[ಟಿಪ್ಪಣಿ] i. ವಿದ್ಯಾರ್ಥಿನಿಯರ ವಿಷಯದಲ್ಲಿ, ವಿಶೇಷ ಸಂದರ್ಭಗಳಲ್ಲಿ ಮಾತ್ರ, ಪರೀಕ್ಷ್ಯೆಯರನ್ನು ಲೋವರ್ ಸೆಕಂಡರೀ ಪರೀಕ್ಷೆ ಮಾಡಿರಬೇಕೆಂಬ ನಿರ್ಬಂಧವಿಲ್ಲದೆಯೇ, ಪಂಡಿತ ಪರೀಕ್ಷೆಗೆ ಕೇರಿಸಿಕೊಳ್ಳುವ ಅಂಕದಲ್ಲಿ ದೇಶೀಯ ಪರೀಕ್ಷಾ ನಿರ್ವಾಹಕ ಸಭೆಯವರು ಯೋಚಿಸಲು ಸಿದ್ಧರಾಗಿರುತ್ತಾರೆ. ಮಹಾರಾಣಿಯವರ ಕಾಲೇಜ್ ಪಂಡಿತ ತರಗತಿಗೆ ಕೇರತಕ್ಕ ಕಾಲದಲ್ಲಿ ಪರೀಕ್ಷ್ಯೆಯರು ಮೂರು ವರ್ಷಗಳ ಕಾಲ ಆಲ್ಲಿ ವ್ಯಾಸಂಗಮಾಡಿದ ತರುವಾಯ ಪಂಡಿತ ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದುವ ಭರವಸೆಯನ್ನು ಕೊಡುವ ಯೋಗ್ಯತೆಯನ್ನು ಕನ್ನಡ ಮತ್ತು ಸಂಸ್ಕೃತದಲ್ಲಿ ಪಡೆದಿದ್ದ ಪಕ್ಷದಲ್ಲಿ, ಅಂಥವರಿಗೆ ಲೋವರ್ ಸೆಕಂಡರಿ ಪರೀಕ್ಷೆ ಮಾಡಿರಬೇಕೆಂಬ ನಿರ್ಬಂಧವನ್ನು ತಪ್ಪಿಸುವದಾಗುತ್ತೆ.

ii. ವಿದ್ಯಾರ್ಥಿನಿಯರು ಕನ್ನಡವನ್ನು ಮಾತ್ರವೇ ಆಗಲೀ ಅಥವಾ ಸಂಸ್ಕೃತವನ್ನು ಮಾತ್ರವೇ ಆಗಲೀ ತೆಗೆದುಕೊಂಡು ಕನ್ನಡ ಪಂಡಿತ ಪರೀಕ್ಷೆಗೆ ಸೇರಬಹುದು.

3. ಈ ಪರೀಕ್ಷೆಗೆ ಸೇರಬೇಕೆಂಬುವರು ಬೆಂಗಳೂರಲ್ಲಿರುವ ದೇಶೀಯ ಪರೀಕ್ಷೆಗಳ ಮ್ಯಾನೇಜರವರಿಗೆ, ಆಗಸ್ಟ್ 15ನೆಯ ತಾರೀಖನ್ನು ಅತಿಕ್ರಮಿಸದೇ ತಲಪುವಂತೆ ದರಖಾಸ್ತುಗಳನ್ನು ಬರದುಕೊಳ್ಳಬೇಕು. ಈ ಪರೀಕ್ಷೆಗೆ ಕೇರುವ ಪ್ರತಿ ಒಬ್ಬರೂ (Candidate) ತಮಗೆ ದೇಶೀಯೋಪಾಧ್ಯಾಯ ಪರೀಕ್ಷೆ, ಅಪ್ಪರ್ ಸೆಕಂಡರಿ ಪರೀಕ್ಷೆ, ಮದ್ರಾಸ್ ಯೂನಿವರ್ಸಿಟಿಯ ಮೆಟ್ರಿಕ್ಯುಲೇಷನ್ ಪರೀಕ್ಷೆ, ಇವುಗಳಲ್ಲಿ ಯಾವುದಾದರೂ ಒಂದು ಆಗಿರುವ ಬಗ್ಗೆ ಕೊಟ್ಟಿರುವ ನಿರ್ಣಯ ಪತ್ರಿಕೆ (ಸರಿಟಿಫಿಕೇಟು) ಯನ್ನು ದರಖಾಸ್ತಿನ ಜೊತೆಯಲ್ಲಿ ಕಳುಹಿಸಬೇಕು. ಪರೀಕ್ಷ್ಯರು ತಮಗೆ ಲೋವರ್ ಸೆಕಂಡರೀ ಪರೀಕ್ಷೆಯಾಗಿರುವ ಅಂಕವನ್ನು ತೋರಿಸುವ ನಿರ್ಣಯ ಪತ್ರಿಕೆಯನ್ನು ದರಖಾಸ್ತಿನ ಜೊತೆಯಲ್ಲಿ ಕಳುಹಿಸಬೇಕು.

4. ಈ ಪರೀಕ್ಷೆಗೆ ಸೇರಿಸಿಕೊಳ್ಳುವುದಕ್ಕಾಗಿ ಕೊಡತಕ್ಕ ವೇತನ ರೂಪಾಯಿಗಳು 5.

5. ಪರೀಕ್ಷ್ಯರು ಕೆಳಗೆ ಹೇಳುವ ವಿಷಯಗಳಲ್ಲಿ ಪರೀಕ್ಷಿಸಲ್ಪಡುವರು :—

I. ಕನ್ನಡ ಭಾಷೆ ಮತ್ತು ಸಾಹಿತ್ಯ.

(a) ಕನ್ನಡ ವ್ಯಾಕರಣ—

ಶಬ್ದಮಣಿದರ್ಪಣ, ಎಲ್ಲಾ	ಒಂದು ಪತ್ರಿಕೆ ಅಂಕಗಳು (Marks)	120
ಶಬ್ದಾನುಶಾಸನ, ಎಲ್ಲಾ. ವ್ಯಾಖ್ಯಾನವಿಲ್ಲ		
ಕರ್ಣಾಟಕ ಕವಿಚರಿತೆ ಪುಟಗಳು 1—100 (ಟೀಕೆಯೊಡನೆ) ...		

(b) ಕನ್ನಡ ಛಂದಸ್ಸು ಮತ್ತು ಅಲಂಕಾರ—

(1) ನಾಗವರ್ಮನ ಛಂದಸ್ಸು	ಅದೇ	... 80
(2) ನಾಗವರ್ಮನ ಕಾವ್ಯಾವಲೋಕನ. ಶಬ್ದಸ್ಮೃತಿ ವಿನಹ ...		
(3) ಶೃಂಗಾರ ರತ್ನಾಕರ		

(c) ಕನ್ನಡ ಪ್ರಬಂಧರಚನೆ—

ಪರೀಕ್ಷಕರಿಂದ ನಿಯಮಿತವಾದ ಎರಡು ವಿಷಯಗಳೊಳಗೆ ಯಾವುದಾದರೂ ಒಂದನ್ನು ಕುರಿತು ಒಂದು ಉಪನ್ಯಾಸ	ಅದೇ	... 100

(d) ಕೆಳಗೆ ಹೇಳುವ ಗ್ರಂಥಗಳು—

1. ಆದಿಪುರಾಣ, ಆಶ್ವಾಸಗಳು 1—6	ಅದೇ	... 100
ಜಗನ್ನಾಥ ವಿಜಯ, ಆಶ್ವಾಸಗಳು 11—15		
2. ಚಂದ್ರಪ್ರಭಪುರಾಣ, II ಭಾಗ	ಅದೇ	... 100
ಕಬ್ಬಿಗರ ಕಾವ.		
3. ಚಿಕ್ಕದೇವರಾಜ ವಂಶಾವಳಿ	ಅದೇ	... 100
ಶಬರಶಂಕರ ವಿಲಾಸ		
4. ಜೈಮಿನಿ ಭಾರತ ಸಂಧಿಗಳು 25 ರಿಂದ ಕೊನೆಯವರೆಗೆ ...	ಅದೇ	... 100
ನಾಗಾನಂದ ನಾಟಕ (ಅನಂತ ನಾರಾಯಣ ಶಾಸ್ತ್ರಿಗಳಿಂದ ರಚಿಸಲ್ಪಟ್ಟುದು).		
ಉತ್ತರ ರಾಮಚರಿತ್ರ ನಾಟಕ ಕಥೆ, (ಕಾವ್ಯಕಲಾನಿಧಿಯಲ್ಲಿ ಪ್ರಕಟಿಸಲ್ಪಟ್ಟುದು).		

II. ಸಂಸ್ಕೃತ ಭಾಷೆ ಮತ್ತು ಸಾಹಿತ್ಯ.

(a) ಸಂಸ್ಕೃತ ವ್ಯಾಕರಣ—

ಲಘು ಕೌಮುದಿ	ಅದೇ	... 80

(b) ಸಂಸ್ಕೃತ ಛಂದಸ್ಸು ಮತ್ತು ಅಲಂಕಾರ—

ವೃತ್ತ ರತ್ನಾಕರ 1—4 ಅಧ್ಯಾಯಗಳು	ಅದೇ	... 120
ಹೇವಿಳಿಚಂದ್ರಕಾವ್ಯಶಾಸನ		
ಕುವಲಯಾನಂದ		

(c) ಕೆಳಗೆ ಹೇಳುವ ಗ್ರಂಥಗಳು—

1. ನೈಷದ, 5—6 ಸರ್ಗಗಳು	ಅದೇ	... 100
ಮೇಘಸಂದೇಶ		
ಹರ್ಷ ಚರಿತ್ರ, ಉಚ್ಛ್ವಾಸಗಳು 4—6. ...		
2. ಉತ್ತರ ರಾಮಚರಿತ್ರ	ಅದೇ	... 100
ರತ್ನಾವಳಿ		

III. ಭಾಷಾಂತರಕರಣ.

ಕನ್ನಡದಿಂದ ಸಂಸ್ಕೃತಕ್ಕೆ 60 ಅಂಕಗಳು	ಅದೇ	... 100
ಸಂಸ್ಕೃತದಿಂದ ಕನ್ನಡಕ್ಕೆ 40 ಅಂಕಗಳು		

6. ಕೆಳಗಿನ ಪಟ್ಟಿಯಲ್ಲಿ ವಿವರಿಸಿರುವ ಕಾಲ, ವಿಷಯ ಕ್ರಮಾನುಸಾರವಾಗಿ ಪರೀಕ್ಷೆಯು ನಡೆಯುವುದು :—

ದಿನ.	ಘಂಟೆ.	ವಿಷಯ.	ಅಂಕಗಳು.	
ಮೊದಲನೆಯ ದಿನ...	10—1	ಕನ್ನಡ ವ್ಯಾಕರಣ	120	200
	2—5	ಕನ್ನಡ ಛಂದಸ್ಸು ಮತ್ತು ಅಲಂಕಾರ	80	
ಎರಡನೆಯ ದಿನ ...	10—1	ಕನ್ನಡ ಗ್ರಂಥಗಳು ಮೊದಲನೆಯ ಪತ್ರಿಕೆ	100	400
	2—5	ಅದೇ ಎರಡನೆಯ ಪತ್ರಿಕೆ	100	
ಮೂರನೆಯ ದಿನ...	10—1	ಅದೇ ಮೂರನೆಯ ಪತ್ರಿಕೆ	100	
	2—5	ಅದೇ ನಾಲ್ಕನೆಯ ಪತ್ರಿಕೆ	100	
ನಾಲ್ಕನೆಯ ದಿನ ...	10—1	ಕನ್ನಡ ಪ್ರಬಂಧರಚನೆ	100	
	2—5	ಭಾಷಾಂತರಕರಣ	100	
ಐದನೆಯ ದಿನ ...	10—1	ಸಂಸ್ಕೃತ ವ್ಯಾಕರಣ	80	200
	2—5	ಸಂಸ್ಕೃತ ಛಂದಸ್ಸು ಮತ್ತು ಅಲಂಕಾರ	120	
ಆರನೆಯ ದಿನ ...	10—1	ಸಂಸ್ಕೃತ ಗ್ರಂಥಗಳು ಮೊದಲನೆಯ ಪತ್ರಿಕೆ	100	200
	2—5	ಅದೇ ಎರಡನೆಯ ಪತ್ರಿಕೆ.	100	

7. ಪರೀಕ್ಷಾ ವಿಷಯಗಳ ಒಂದೊಂದು ಸಮುದಾಯದಲ್ಲಿಯೂ ಪೂರ್ಣಾಂಕದಲ್ಲಿ ಶೇಕಡಾ 40ಕ್ಕೆ ಕಡಿಮೆ ಇಲ್ಲದೆ ಅಂಕಗಳನ್ನು ಪಡೆದವರು ಪರೀಕ್ಷೆಯಲ್ಲಿ ತೇರ್ಗಡೆಯಾದಂತೆ ಭಾವಿಸಲ್ಪಡುವರು.

ಪರೀಕ್ಷಾ ವಿಷಯಗಳು ಕೆಳಗೆ ಕಾಣಿಸಿರುವಂತೆ 6 ಸಮುದಾಯಗಳಾಗಿ ಮಾಡಲ್ಪಟ್ಟಿವೆ :—

(1) I *a* ಮತ್ತು *b* | (3) I *d*. | (5) II *c*.
(2) I *c*. | (4) II *a* ಮತ್ತು *b* | (6) III.

ತೇರ್ಗಡೆಯಾದವರೊಳಗೆ, ಒಟ್ಟು ಅಂಕ ಸಂಖ್ಯೆಯಲ್ಲಿ ಶೇಕಡಾ 60ಕ್ಕೆ ಕಡಿಮೆ ಇಲ್ಲದೆ ಅಂಕಗಳನ್ನು ಪಡೆದವರು ಮೊದಲನೆಯ ವರ್ಗದಲ್ಲಿಯೂ, ಉಳಿದವರು ಎರಡನೆಯ ವರ್ಗದಲ್ಲಿಯೂ ಸೇರಿಸಲ್ಪಡುವರು.

8. ಕನ್ನಡ ಪಂಡಿತ ಪರೀಕ್ಷೆಯಲ್ಲಿ ತೇರ್ಗಡೆಯಾದವರಿಗೆ "ಅಪ್ಪರ್ ಸೆಕಂಡರಿ" ಅಂತಸ್ತಿನ ಉಪಾಧ್ಯಾಯ ನಿರ್ಣಯ ಪತ್ರಿಕಾ ಪರೀಕ್ಷೆಯೂ ಕೂಡ ಆಗಿದ್ದ ಪಕ್ಷದಲ್ಲಿ, ಕಾಲೇಜುಗಳಲ್ಲಿಯೂ ಹೈ ಸ್ಕೂಲುಗಳಲ್ಲಿಯೂ ಕನ್ನಡ ಮುನಸಿಗಳ ಕೆಲಸವನ್ನೂ, ತಾಲ್ಲೂಕು ಕನ್ನಡ ಸ್ಕೂಲ್‌ಗಳಲ್ಲಿ ಹೆಡ್ಮಾಸ್ತರುಗಳ ಕೆಲಸವನ್ನೂ ಕೊಡುವಾಗ ಇತರ ದರಖಾಸ್ತುದಾರರಿಗಿಂತ ಇವರಿಗೆ ಹೆಚ್ಚು ಪ್ರಾಮುಖ್ಯವು ಕೊಡಲ್ಪಡುವುದು.

9. ಈ ಪ್ರಕಟನೆಯು ಸ್ರ 1911ನೆಯ ಇಸವಿ ನವೆಂಬರು ಪರೀಕ್ಷೆಯಿಂದ ಆಚರಣೆಯಲ್ಲಿ ತರಲ್ಪಡುತ್ತದೆ.

ಹೆಚ್. ಜೆ. ಭಾಭಾ,
ಇನ್‌ಸ್ಪೆಕ್ಟರ್ ಜನರಲ್ ಆಫ್ ಎಡ್ಯುಕೇಷನ್.

ಫಾರೆಸ್ಟ್ ಇಲಾಖೆ.

1908ನೆ ಇಸವಿ ಏಪ್ರೆಲ್ 24.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ—ಮೈಸೂರು ಡಿಸ್ಟ್ರಿಕ್ಟಿನಲ್ಲಿ ಈ ಕೆಳಗೆ ನಮೂದಿಸುವ ಸ್ಥಳದಲ್ಲಿ ಅದರ ಬಾಜೂದಲ್ಲಿ ಕಂಡ ತಾರೀಖುಗಳಲ್ಲಿ ಜಂಗಲ್ ಪಸಾರೆ ಜಿನಸುಗಳನ್ನು ಬಹಿರಂಗವಾದ ಹರಾಜು ಮೂಲಕ ನಿಕ್ರಯಿಸಲ್ಪಡುತ್ತೆ :—

ನಂಬ್ರು.	ಸ್ಥಳ.	ಹರಾಜು ತಾರೀಖು.	ಹರಾಜು ಮಾಡಿಸುವ ಆಫಿಸರವರ ಹೆಸರು.	ಪಸಾರೆ ಜಿನಸು ಮೊತ್ತ.	
				ಅವ್ವೆಲ್ ಅರಗು.	ಅಳಲೆಕಾಯಿ.
				ಮಣ. ಪ.	ಮಣ. ಪ.
1	ಶ್ರೀರಂಗಪಟ್ಟಣದ ಕೋಟೆ ...	13—3—1909	ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು.	100 0	1,600 0

ಪರತ್ತು :—1887ನೆ ಇಸವಿ ಜೂನ್ 18ನೆ ಮಂಗಳವಾರ ಮೈಸೂರು ಗೆಜೆಟ್ಟಿನ 287—288ನೆ ಪುಟಗಳಲ್ಲಿ ಇರುವ ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರ 87ನೆ ಇಸವಿ ಜೂನ್ 11ನೆ ಮಂಗಳವಾರ ನೋಟಿಫಿಕೇಷನನ್ನು ನೋಡಿ.